ಹೇಳುತ್ತಿದ್ದಾನೆ ಎನ್ನುವುದೇ ಭಾಷಾತಜ್ಞನಿಗೆ ಅರ್ಥವಾಗುವುದಿಲ್ಲ. ಝಿಕ್ರಿಲ್ ಜೊತೆಗೆ ಸ್ಪ್ಯಾನಿಶ್ ಕೂಡ ಗೊತ್ತಿರುವ ಎವೆರಿಸ್ಟೊನನ್ನು ಮಾತನಾಡಿಸೋಣವೆಂದರೆ, ಅವನು ಮಾರ್ಟಿನ್‌ನನ್ನು ಹತ್ತಿರಕ್ಕೇ ಬಿಟ್ಟುಕೊಳ್ಳಲೊಲ್ಲ. ಇಬ್ಬರು ಮುದುಕರು ಒಟ್ಟಿಗೆ ಕೂತು ಝಿಕ್ರಿಲ್ ಮಾತನಾಡುವುದನ್ನು ದಾಖಲಿಸಬೇಕೆನ್ನುವುದು ಮಾರ್ಟಿನ್‌ನ ಆಸೆ. ಆದರೆ, ತಮ್ಮ ತಾರುಣ್ಯಕಾಲದ ವೈಮನಸ್ಸನ್ನು ಮುಪ್ಪಿನಲ್ಲೂ ಚಾಲ್ತಿಯಲ್ಲಿಟ್ಟಿರುವ ಮುದುಕರು ಹಾವುಮುಂಗುಸಿಯಂತೆ ಜಿದ್ದು ಸಾಧಿಸುತ್ತಾರೆ. 'ಝಿಕ್ರಿಲ್ ಬೇಕಾದರೆ ಮಾತನಾಡುವ. ಆದರೆ, ಎವೆರಿಸ್ಟೊನ ಬಳಿಗೆ ಹೋಗಬೇಡ' ಎಂದು ಇಸಾವುರೊ ಷರತ್ತು ವಿಧಿಸುತ್ತಾನೆ. ಎವೆರಿಸ್ಟೊಗಂತೂ ಮಾರ್ಟಿನ್‌ನ ನೆರಳು ಕಂಡರೂ ಆಗದು.

ಝಿಕ್ರಿಲ್ ದಾಖಲಾತಿಯ ನಿಟ್ಟಿನಲ್ಲಿ ಮಾರ್ಟಿನ್‌ನಿಗೆ ಮುದುಕರ ಮುನಿಸನ್ನು ಬಗೆಹರಿಸುವ ತಲೆನೋವು ಎದುರಾಗುತ್ತದೆ. ಒಂದು ಹಂತದಲ್ಲಿ ಇಸಾವುರೊ ಮೆತ್ತಗಾದರೂ, ಎವೆರಿಸ್ಟೊ ಹಟ ಬಿಡುವುದಿಲ್ಲ. ಆಗ ಭಾಷಾಶಾಸ್ತ್ರಜ್ಞನ ನೆರವಿಗೆ ಬರುವುದು ಹಟಮಾರಿ ಮುದುಕನ ಮೊಮ್ಮಗಳು. ಝಿಕ್ರಿಲ್‌ನ ಗಂಧಗಾಳಿಯೂ ಇಲ್ಲದ ಸ್ಪ್ಯಾನಿಷ್‌ನ ಆ ತರುಣಿಗೆ, ತನ್ನ ಇಂಗ್ಲಿಷನ್ನು ಸುಧಾರಿಸಿಕೊಂಡು ಅಮೆರಿಕಗೆ ಹೋಗಿ ಬದುಕು ಕಂಡುಕೊಳ್ಳುವ ಆಸೆ. ಮಾರ್ಟಿನ್ ಮೊದಲಿಗೆ ಆ ಯುವತಿಯ ಸಖ್ಯ ಬೆಳೆಸುತ್ತಾನೆ. ಇಬ್ಬರ ನಡುವೆ ಸ್ನೇಹ–ಸಲಿಗೆ ಬೆಳೆಯುತ್ತದೆ. ತನ್ನ ಅಜ್ಜನನ್ನು ಇಸಾವುರೊ ಎದುರಿಗೆ ಕೂರಿಸುವ ಮಾರ್ಟಿನ್‌ನ ಪ್ರಯತ್ನಕ್ಕೆ ಮೊಮ್ಮಗಳೂ ಮುಂದಾಗುತ್ತಾಳೆ. ಮೊಮ್ಮಗಳ ಒತ್ತಾಯಕ್ಕೆ, ಅವಳು ಬಯಸಿದ ಸ್ಮಾರ್ಟ್ ಟೀವಿಯನ್ನು ಮಾರ್ಟಿನ್ ತಂದುಕೊಟ್ಟ ಮುಲಾಜಿಗೆ ಎವೆರಿಸ್ಟೊ ಮಣಿಯುತ್ತಾನೆ. ಕೊನೆಗೆ ತನ್ನ ಕುರ್ಚಿಯೊಂದಿಗೆ

ಚಿತ್ರ: **ಐ ಡ್ರೀಮ್ ಇನ್ ಅನದರ್ ಲಾಂಗ್ವೇಜ್**
ನಿರ್ದೇಶನ: **ಎರ್ನೆಸ್ಟೊ ಕಾಂಟ್ರಿಯಾನ್ಸ್**
ಭಾಷೆ: **ಸ್ಪ್ಯಾನಿಷ್**
ದೇಶ: **ಮೆಕ್ಸಿಕನ್**

